**ದಿನಾಂಕಃ 09.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟಿ ಸವಾಲುಃ 1 ಮತ್ತು 2 ನೇ ಪ್ರತಿವಾದಿ ಪರ ಶ್ರೀ. ಎನ್.ಕೆ. ವಕೀಲರಿಂದಃ**

ನಾನು ದಿಃ 01.01.1961 ರಲ್ಲಿ ಜನಿಸಿರುತ್ತೇನೆ. ನ್ಯಾಯಾಲಯದಲ್ಲಿ ಸಲ್ಲಿಸಿದ ಪ್ರಮಾಣ ಪತ್ರದಲ್ಲಿ ನಮೂದಿಸಿರುವ ಸಂಗತಿಗಳು ನನಗೆ ಗೊತ್ತಿರುತ್ತವೆ. 1 ಮತ್ತು 2 ನೇ ಪ್ರತಿವಾದಿಯವರ ತಂದೆ ತಾಯಿ ಗುರುಸಿದ್ದಪ್ಪ ಮತ್ತು ಬಸವಣ್ಣಮ್ಮ ರವರನ್ನು ನೋಡಿರುತ್ತೇನೆ. ಅವರು ಯಾವಾಗ ಮರಣ ಹೊಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ  ಗುರುಸಿದ್ದಪ್ಪ ಮತ್ತು ಬಸವಣ್ಣಮ್ಮ ರವರಿಗೆ ಎರಡು ಜನ ಹೆಣ್ಣು ಮಕ್ಕಳು ಅಂದರೆ ಸರಿ. ಅವರು 1 ಮತ್ತು 2 ನೇ ಪ್ರತಿವಾದಿಯವರು ಅಂದರೆ ಸರಿ. 1978 ರಲ್ಲಿ ನನಗೆ 16–17 ವರ್ಷ ಅಂದರು ಸರಿ. ಆ ಸಂದರ್ಭದಲ್ಲಿ ನನಗೆ ಗುರುಸಿದ್ದಪ್ಪ ಮತ್ತು ಚನ್ನಬಸಪ್ಪ ದತ್ತು ಸ್ವೀಕಾರ ಕಾರ್ಯಕ್ರಮಕ್ಕೆ ಕರೆದಿರುತ್ತಾರೆ. ಸದರಿ ಕಾರ್ಯಕ್ರಮದಲ್ಲಿ ಸುಮಾರು ನೂರಾರು ಜನ ಸೇರಿರುತ್ತಾರೆ. ಆ ಸಂದರ್ಭದಲ್ಲಿ ನನಗಿಂತ ಹಿರಿಯರು ಸಾಕಷ್ಟು ಜನ ಇದ್ದರು ಅಂದರೆ ಸರಿ. ನಾನು ಕಾರ್ಯಕ್ರಮದಲ್ಲಿ ಒಂದು ಪತ್ರಕ್ಕೆ ಸಹಿ ಮಾಡಿರುತ್ತೇನೆ. ಸದರಿ ಪತ್ರವು 1 ನೇ ಪ್ರತಿವಾದಿಯ ಹತ್ತಿರ ಇರುತ್ತದೆ. ದಾವಾ ಆಸ್ತಿಗೆ ಸಂಬಂಧಿಸಿದಂತೆ ವಾದಿ ಮತ್ತು 3 ನೇ ಪ್ರತಿವಾದಿಯವರು ಒಂದು ದಾವೆ ದಾಖಲಿಸಿದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸದರಿ ದತ್ತು ಪತ್ರವು ಊರಲ್ಲಿ ಆಗಿರುತ್ತದೆ. ನೊಂದಣಿ ಆದ ಬಗ್ಗೆ ನನಗೆ ಮಾಹಿತಿ ಇಲ್ಲ. ನಾನು ಈ ಹಿಂದೆ ಸಾಕಷ್ಟು ಪ್ರಕರಣಗಳಲ್ಲಿ ಸಾಕ್ಷಿ ನೀಡಲು, ಜಾಮೀನು ನೀಡಲು ಬಂದು ಹೋಗಿ

ಮಾಡಿರುತ್ತೇನೆ ಅಂದರೆ ಸರಿಯಲ್ಲ. ನಾನು ಹೋಗಿದ್ದ ದತ್ತು ಸ್ವೀಕಾರ ಕಾರ್ಯಕ್ರಮಕ್ಕೆ ಪೌರತ್ವವನ್ನು ಕೊಟ್ರಪ್ಪ ಜವಳಿಯವರು ವಹಿಸಿರುತ್ತಾರೆ. ಅವರು ಈಗ ಮೃತಪಟ್ಟಿರುತ್ತಾರೆ. ಅವರಿಗೆ ಹೆಣ್ಣು ಮಕ್ಕಳು ಮಾತ್ರ ಇರುತ್ತಾರೆ. ಸದರಿ ದತ್ತು ಸ್ವೀಕಾರ ಕಾರ್ಯಕ್ರಮದಲ್ಲಿ ಭಾವಚಿತ್ರ ತೆಗೆದ ಬಗ್ಗೆ ನನಗೆ ಅಷ್ಟೊಂದು ನೆನಪಿಲ್ಲ. ನಾನು ಹೇಳಿದಂತೆ 1978 ರಲ್ಲಿ ದತ್ತು ಸ್ವೀಕಾರ ಕಾರ್ಯಕ್ರಮ ನಡೆದಿರುವುದಿಲ್ಲ. ವಾದಿ ಮತ್ತು 3 ನೇ ಪ್ರತಿವಾದಿಯವರ ಪ್ರಭಾವಕ್ಕೆ ಒಳಗಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಅಂದರೆ ಸರಿಯಲ್ಲ. 3 ನೇ ಪ್ರತಿವಾದಿ ಕಟ್ಟಿರುವ ಮನೆಯ ಪಕ್ಕದಲ್ಲಿ 1 ಮತ್ತು 2 ನೇ ಪ್ರತಿವಾದಿಯವರ ಹಿಸ್ಸೆ ಇತ್ತು ಅಂದರೆ ಸರಿ. ನಿಪಿ-18 ಮತ್ತು 19 ರಲ್ಲಿ ಕಾಣುವ ಹೊಸ ಮನೆಯು 3 ನೇ ಪ್ರತಿವಾದಿಯವರದ್ದು ಅಂದರೆ ಸರಿ. ಸದರಿ ನಿಪಿ-18 ಮತ್ತು 19 ರಲ್ಲಿ ಕಾಣುವ ಹೊಸ ಮನೆಯ ಜಾಗವನ್ನು 1 ಮತ್ತು 2 ನೇ ಪ್ರತಿವಾದಿಯವರು 4 ನೇ ಪ್ರತಿವಾದಿಯವರಿಗೆ ಮಾರಾಟ ಮಾಡಿರುತ್ತಾರೆ ಅಂದರೆ ನನಗೆ ಗೊತ್ತಿಲ್ಲ. ಸದರಿ ಮನೆಯಲ್ಲಿ 4 ನೇ ಪ್ರತಿವಾದಿ ವಾಸವಾಗಿರುತ್ತಾನೆ ಅಂದರೆ ನನಗೆ ಗೊತ್ತಿಲ್ಲ. ಸದರಿ ಮನೆಯಿಂದ ನನ್ನ ಮನೆಯು ಸುಮಾರು 200-250 ಅಡಿ ದೂರ ಇದೆ. 1 ಮತ್ತು 2 ನೇ ಪ್ರತಿವಾದಿಯವರ ಹಿಸ್ಸೆಗೆ ಇದ್ದ ಜಮೀನನ್ನು ಈ ಹಿಂದೆ ನಾನು ಖರೀದಿಗೆ ಕೇಳಿರುತ್ತೇನೆ ಅಂದರೆ ಇಲ್ಲ. ನಿಪಿ-18 ಮತ್ತು 19 ರಲ್ಲಿ ಕಾಣುವ ಮನೆಯಲ್ಲಿ 3 ನೇ ಪ್ರತಿವಾದಿ ವಾಸವಾಗಿದ್ದು, ವಾದಿಯು ಸೊರಬದಲ್ಲಿ ವಾಸವಾಗಿರುತ್ತಾನೆ ಅಂದರೆ ಸರಿ. ಸದರಿ ಮನೆಯನ್ನು 3 ನೇ ಪ್ರತಿವಾದಿಯು ಕಟ್ಟಿಸಿರುತ್ತಾನೆ ಅಂದರೆ ಸರಿ.

1 ಮತ್ತು 2 ನೇ ಪ್ರತಿವಾದಿಯವರು ಸದರಿ ಜಾಗವನ್ನು ಖರೀದಿಗೆ ನೀಡದೇ ಇದ್ದ ಕಾರಣ ಅವರ ವಿರುದ್ಧ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. 3 ನೇ ಪ್ರತಿವಾದಿಯನ್ನು ಗುರುಸಿದ್ದಪ್ಪ ಮತ್ತು ಬಸವಣ್ಣಮ್ಮ ಯಾವುದೇ ಕಾಲಕ್ಕೂ ದತ್ತು ತೆಗೆದುಕೊಂಡಿರುವುದಿಲ್ಲ. ಆತನು ಅವರ ದತ್ತು ಮಗ ಅಲ್ಲ ಅಂದರೆ ಸರಿಯಲ್ಲ. ನಾನು ಯಾವುದೇ ದತ್ತು ಸ್ವೀಕಾರ ಕಾರ್ಯಕ್ರಮಕ್ಕೆ ಭಾಗವಹಿಸಿಲ್ಲ ಅಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

**(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಕಂಪ್ಯೂಟರೀಕರಿಸಲಾಯ್ತು).**
**ಓ.ಹೇ.ಕೇ. ಸರಿ ಇದೆ ಎಂದು ಒಪ್ಪಿದ್ದಾರೆ.**

**ಪ್ರಧಾನ ವ್ಯವಹಾರ ನ್ಯಾ ಮತ್ತು ಜೆ.ಎಂ.ಎಫ್.ಸಿ**
**ಸೊರಬ.**